**ಓ.ಎಸ್. ನಂ. 119/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 27.3.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಗಣಕೀಕೃತ ಪಹಣಿಯನ್ನು ನಿಪಿ1 ಎಂದು, ಜಿಲ್ಲಾ ಪಂಚಾಯತ್, ಮೈಸೂರು ಇವರು ನೀಡಿರುವ ಕಾಮಗಾರಿ ಅಂದಾಜು ವೆಚ್ಚ ಪಟ್ಟಿಯನ್ನು ನಿಪಿ2 ಎಂದು, ದಿನಾಂಕ 19.1.2023 ರಂದು ಹಿರಿಯ ಸಹಾಯ ತೋಟಗಾರಿಕೆ ನಿರ್ದೇಶಕರು ರವರು ಆರ್.ಎಫ್.ಓ, ಹುಣಸೇಹಳ್ಳಿ ಇವರಿಗೆ ಬರೆದಿರುವ ಪತ್ರವನ್ನು ನಿಪಿ3 ಎಂದು, ದಿನಾಂಕ 16.12.2022 ರಂದು ಆರ್.ಎಫ್.ಓ, ಹುಣಸೇಹಳ್ಳಿ ರವರು ಕ್ಷೇತ್ರಪಾಲಕರು, ಸರಗೂರು ಇವರಿಗೆ ಬರೆದಿರುವ ಪತ್ರವನ್ನು ನಿಪಿ4 ಎಂದು, ಅಗ್ರಿಗಾರ್ಡ, ಹೆಚ್.ಡಿ.ಕೋಟೆ ಇವರು ನೀಡಿರುವ ಕೊಟೇಶನ್‌ನ್ನು ನಿಪಿ5 ಎಂದು, ದಿನಾಂಕ 28.3.2023 ರಂದು ಪ್ರತಿವಾದಿಯರಿಗೆ ಕಲಂ 80(1) ಸಿ.ಪಿ.ಸಿ ಅಡಿ ನೀಡಿರುವ ನೋಟಿಸನ್ನು ನಿಪಿ6 ಎಂದು, ಮೂರು ಅಂಚೆ ರಶೀದಿಗಳನ್ನು ನಿಪಿ7 ರಿಂದ ನಿಪಿ9 ಎಂದು, ಮೂರು ಅಂಚೆ ಸ್ವೀಕೃತಿಗಳನ್ನು ನಿಪಿ10 ರಿಂದ ನಿಪಿ12 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.